ಓ ಎಸ್ ನಂ: 127/2023
ಪಿ. ಡಬ್ಲ್ಯೂ-3

**(ಇಂದು ದಿನಾಂಕ 27-10-2025 ರಂದು ಮಧ್ಯಂತರ ಅರ್ಜಿ ನಂ: 10 ಮತ್ತು 11 ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)**

ಪಾಟೀಸವಾಲು: ಪ್ರತಿವಾದಿ ನಂ: 1 ರಿಂದ 7 ರವರ ಪರ ಶ್ರೀ ಪಿ ಎಸ್ ಯು ವಕೀಲರಿಂದ

ನಾನು ಶಿಕ್ಷಣ ಪಡೆದಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ 1 ನೇ ವಾದಿ ಹೇಳಿದರು . 1 ನೇ ವಾದಿಯು ನಾನು ಯಾವರೀತಿ ಸಾಕ್ಷಿ ಕೊಡಬೇಕು , ಏನು ಹೇಳಬೇಕು ಎನ್ನುವುದನ್ನು ನನಗೆ ಹೇಳಿದ್ದಾನೆ ಎಂದರೆ ಸರಿ . ನಾನು ಮತ್ತು 1 ನೇ ವಾದಿ ಮಾತನಾಡಿರುವ ರೀತಿಯಲ್ಲಿ ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ .

ಬೆಳ್ಳಿಗಟ್ಟಿ ಕುಟುಂಬದವರು ನಿಗದಿ ಗ್ರಾಮದವರು ಆದರೆ ಅಮ್ಮಿನಕೊಪ್ಪ ಗ್ರಾಮದವರು ಅಲ್ಲ ಎಂದರೆ ಸರಿ . ಬೆಳ್ಳಿಗಟ್ಟಿ ಕುಟುಂಬದವರ ಸಂಪೂರ್ಣ ಮಾಹಿತಿ ನನಗೆ ವೈಯಕ್ತಿಕವಾಗಿ ಇದೆ . ಗಂಗಪ್ಪ ಮತ್ತು ಸೋಮಪ್ಪ ಬೆಳ್ಳಿಗಟ್ಟಿ ಇವರ ಕುಟುಂಬದ ಮೂಲ ಪುರಷ ಮಲ್ಲಪ್ಪ ಇವರ ಹೆಸರಿಗೆ ಎಷ್ಟು ಆಸ್ತಿ ಇತ್ತು ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಮಲ್ಲಪ್ಪ ಇವರ ಮಕ್ಕಳಾದ ಗಂಗಪ್ಪ ಮತ್ತು ಸೋಮಪ್ಪ ಇವರ ಹೆಸರಿಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ . ನಮ್ಮ ಜಮೀನು ಬೆಳ್ಳಿಗಟ್ಟಿ ಕುಟುಂಬದವರ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿವೆ ಎನ್ನುವ ಕಾರಣಕ್ಕಾಗಿ ನನಗೆ ಮಾಹಿತಿ ಇದೆ ಎಂದರೆ ಸರಿ . ಬೆಳ್ಳಿಗಟ್ಟಿ ಕುಟುಂಬದವರ ಪೈಕಿ ನಿಮಗೆ ಯಾರು ಹೆಚ್ಚಿನ ಪರಿಚಿತರು ಎಂದರೆ ಕೇಳಿದರೆ ಸಾಕ್ಷಿಯು ಎಲ್ಲರು ಪರಿಚಿತರು ಎಂದು ಹೇಳುತ್ತಾರೆ . ಸೋಮಪ್ಪ ಇವರು ಮರಣ ಹೊಂದಿ 4 ವರ್ಷ ಕಳೆಯಿತು . ಗಂಗಪ್ಪ ಮತ್ತು ಸೋಮಪ್ಪ ಇವರು ಕೂಡಿಯೇ ಇದ್ದಾಗ ಅವರ ಕುಟುಂಬಕ್ಕೆ ಇದ್ದ ಉತ್ಪನ್ನಗಳ ಕುರಿತು ನನಗೆ ಮಾಹಿತಿ ಇಲ್ಲ . ಬೆಳ್ಳಿಗಟ್ಟಿ ಕುಟುಂಬದವರ ಕೃಷಿ ಮೂಲದಿಂದ ವಾರ್ಷಿಕ ಎಷ್ಟು ಆದಾಯ ಮತ್ತು ಖರ್ಚು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ . ಬೆಳ್ಳಿಗಟ್ಟಿ ಕುಟುಂಬದವರ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರಗಳಲ್ಲಿ / ಹಣಕಾಸಿನ ವ್ಯವಹಾಗಳಲ್ಲಿ ನಾನು ಭಾಗಿಯಾಗಿಲ್ಲ . ಈ ಹಿನ್ನಲೆಯಲ್ಲಿ ಬೆಳ್ಳಿಗಟ್ಟಿ ಕುಟುಂಬದವರ ಹಣಕಾಸಿನ ವ್ಯವಹರಗಳ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿ .

1 ನೇ ಪ್ರತಿವಾದಿಯ ಗಂಡನು ಎಷ್ಟು ಶಿಕ್ಷಣ ಪಡೆದಿದ್ದ ಎಂದು ನನಗೆ ಗೊತ್ತಿಲ್ಲ . 1 ನೇ ಪ್ರತಿವಾದಿಯ ಗಂಡ ಹೈಸ್ಕೂಲ್ ನಲ್ಲಿ ಮಾಸ್ತರ ಆಗಿ ಕೆಲಸ ಮಾಡುತ್ತಿದ್ದರು . ಮಲ್ಲಪ್ಪ ಇವರಿಗೆ ನೌಕರಿಯಿಂದ ಪಗಾರ ಬರುತ್ತಿತ್ತು ಸಾಕ್ಷಿಯು ಮೊದಲು 10 ವರ್ಷ ಪಗಾರ ಬರುತ್ತಿರಲಿಲ್ಲ ನಂತರ ಬರುತ್ತಿತ್ತು ಆದರೆ ಎಷ್ಟು ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . ಮಲ್ಲಪ್ಪ ಇವರಿಗೆ ಮೊದಲು 10 ವರ್ಷ ಪಗಾರ ಕೊಡುತ್ತಿರಲಿಲ್ಲ ಎನ್ನುವ ವಿಚಾರವನ್ನು ನನಗೆ 1 ನೇ ವಾದಿ ಹೇಳಿದ್ದನು . ಮಲ್ಲಪ್ಪ ಇವರು ಅಂದಾಜು 25 ವರ್ಷಗಳ ಕಾಲ ಮಾಸ್ತರ ಆಗಿ ಸೇವೆ ಸಲ್ಲಿಸಿರಬಹುದು . ಮಲ್ಲಪ್ಪ ಇವರು ತನ್ನ ಸೇವಾಅವಧಿಯಲ್ಲಿ ಗಳಿಸಿದ ಪಗಾರಿನಿಂದ ಎಷ್ಟು ಖರ್ಚು ಮಾಡಿದ್ದಾರೆ ಮತ್ತು ಎಷ್ಟು ಉಳಿಸಿದ್ದಾರೆ ಎನ್ನುವ ಕುರಿತು ನನಗೆ ಮಾಹಿತಿ ಇಲ್ಲ .

ಪ್ರತಿವಾದಿ 2 ಮತ್ತು 3 ರವರು ಧಾರವಾಡದಲ್ಲಿ ಮೊಬೈಲ ಅಂಗಡಿ ಇಟ್ಟಿದ್ದರು . ಪ್ರತಿವಾದಿ 2 ಮತ್ತು 3 ರವರು ಚಹಾದ ಅಂಗಡಿ ನಡೆಸುತ್ತಿದ್ದರು ಎಂದು ವಾದಿಯರು ಹೇಳಿದ್ದರು ಆದರೆ ಪ್ರತಿವಾದಿ 2 ಮತ್ತು 3 ರವರು ಲೂಬಿರಿಕೆಂಟ್ ಅಂಗಡಿ ನಡೆಸುತ್ತಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ . ಪ್ರತಿವಾದಿ 2 ಮತ್ತು 3 ರವರು ತಾರಿಹಾಳದಲ್ಲಿ ಪ್ಯಾಕ್ಟರಿ ಹಾಕುವ ಮೊದಲು ಎಷ್ಟು ಆದಾಯ ಹಾಗೂ ಖರ್ಚು ಹೊಂದಿದ್ದರು ಎಂದು ನಾನು ತಿಳಿದುಕೊಂಡಿಲ್ಲ . ಮಲ್ಲಪ್ಪ ಹಾಗೂ ಅವರ ಮಕ್ಕಳಾದ ಪ್ರತಿವಾದಿ 2 ಮತ್ತು 3 ರವರ ಖರ್ಚು ವೆಚ್ಚಗಳ ಬಗ್ಗೆ ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ . ಸದರಿಯವರ ಆಯ ವ್ಯಯದ ಬಗ್ಗೆ ನನಗೆ ಗೊತ್ತಿಲ್ಲದ ಕಾರಣ ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಬರೆಯಿಸಿಲ್ಲ . 1 ನೇ ವಾದಿಯು ತನ್ನ ಸಹೋದರ ಮಲ್ಲಪ್ಪ ಹಾಗೂ ಅವರ ಮಕ್ಕಳ ಉದ್ಯೋಗದಿಂದ ಬರುವ ಆದಾಯ ಹಾಗೂ ಖರ್ಚುಗಳ ಕುರಿತು ನನಗೆ ಹೇಳಿಲ್ಲ . ಆದ್ದರಿಂದ ನಾನು ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ . ಸದರಿಯವರ ವರಮಾನದ ಮಾಹಿತಿಯನ್ನು ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿದರೆ ನ್ಯಾಯಾಲಯಕ್ಕೆ ಸತ್ಯ ತಿಳಿಯುತ್ತದೆ ಎನ್ನುವ ಕಾರಣಕ್ಕಾಗಿ ನಾನು ಮತ್ತು 1 ನೇ ವಾದಿ ಕೂಡಿಕೊಂಡು ಅದನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ .

ಬೆಳ್ಳಿಗಟ್ಟಿ ಕುಟುಂಬದವರ ಜಮೀನುಗಳ ದಾಖಲೆ ನೋಡಿಲ್ಲ . ನಾನು ಮಲ್ಲಪ್ಪ ಮತ್ತು ಅವರ ಸಹೋದರರ ನಡುವೆ ವಾಟಣಿ ಕುರಿತು ಪಂಚಾಯಿತಿ ಮಾಡುವಲ್ಲಿ ನಾನು ಭಾಗವಹಿಸಿರಲಿಲ್ಲ . ಸರ್ವೆ

ನಂಃ **238/1** ಜಮೀನಿನ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ . ಈ ಹಿನ್ನಲೆಯಲ್ಲಿ ಸದರಿ ಜಮೀನಿನ ಕುರಿತು ಆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ .

ತಾರಿಹಾಳದಲ್ಲಿರುವ ಪ್ಯಾಕ್ಟರಿಯನ್ನು ನಾನು ನೋಡಿಲ್ಲ ಆದರೆ ವಾದಿ ಬಸವರಾಜ ಹೇಳಿದ್ದನು . ತಾರಿಹಾಳದಲ್ಲಿರುವ ಪ್ಯಾಕ್ಟರಿಯನ್ನು ಖರೀದಿಗೆ ಅಥವಾ ಬಾಡಿಗೆಗೆ ಅಥವಾ ಲೀಸ್ ಗೆ ತೆಗೆದುಕೊಂಡಿದ್ದಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಆದರೆ ವಾದಿ ಬಸವರಾಜ ಹೇಳಿದ್ದರಿಂದ ಮಾತ್ರ ಗೊತ್ತು ಎಂದು ಹೇಳುತ್ತಾರೆ . ಸದರಿ ಪ್ಯಾಕ್ಟರಿಯು ಮಲ್ಲಪ್ಪ ಇವರ ಹೆಸರಿನಲ್ಲಿ ಇದೆ . ಸದರಿ ಪ್ಯಾಕ್ಟರಿ ಹಾಕಲು ರೂ. **60** ಲಕ್ಷ ಹಣ ಖರ್ಚು ಮಾಡಿದ್ದಾರೆ ಎಂದು ನನಗೆ ವಾದಿ ಬಸವರಾಜ ಹೇಳಿದ್ದನು . ಸದರಿ ಪ್ಯಾಕ್ಟರಿ ನಡೆಸಲು ಪ್ರತಿವಾದಿ **2** ಮತ್ತು **3** ರವರು ಯಾವ ಯಾವ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಮತ್ತು ಎಷ್ಟು ಬಂಡವಾಳ ಹಾಕಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಪ್ಯಾಕ್ಟರಿ ಹಾಕುವ ಕಾಲಕ್ಕೆ ನಮ್ಮಲ್ಲಿ ರೂ. **60** ಲಕ್ಷ ರೂಪಾಯಿ ಹಣ ಇತ್ತು ಎನ್ನುವುದನ್ನು **1** ನೇ ವಾದಿ ಬಸವರಾಜ ನನಗೆ ತೋರಿಸಿಲ್ಲ . ಮಲ್ಲಪ್ಪ ಇವನು ಮನೆತನದ ಹಿರಿತನ ಮಾಡುತ್ತಿದ್ದ ಎನ್ನುವುದನ್ನು ವಾದಿ ಬಸವರಾಜ ಹೇಳಿದ್ದಾನೆ ಎಂದರೆ ಸರಿ . ಸಾಕ್ಷಿಯು ಅವರು ಮನೆತನದ ಹಿರಿತನ ಮಾಡುವುದು ನನಗೂ ಗೊತ್ತು ಎಂದು ಹೇಳುತ್ತಾರೆ . ಮಲ್ಲಪ್ಪ ಇವರು ನೌಕರಿ ಮಾಡುತ್ತಿದ್ದ ಕಾರಣ ಮನೆತನದ ಹಿರಿತನ ಮಾಡಿಲ್ಲ ಆದರೂ ವಾದಿಯರ ಮಾತು ಕೇಳಿ ಹಿರಿತನ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಬರೆದಿರುವ ಮಾಹಿತಿಗಳು ಸಂಪೂರ್ಣ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ . ವಾದಿಯರಿಗೆ ಅನುಕೂಲವಾಗಲೀ ಎಂದು ಅವರು ಹೇಳಿದ ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಬೆಳ್ಳಿಗಟ್ಟಿ ಕುಟುಂಬದವರ ಕುರಿತು ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ .

ಮರುವಿಚಾರಣೆ ೦ಃ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.